**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 15/2020 ಅ.ಸಾ. 7**

**ಬಾ.ಸಾ.7**

| | | |
|---|---|---|
| ಸಾಕ್ಷಿದಾರರ ಹೆಸರು | - | ಪ್ರವೀಣ್ |
| ತಂದೆಯ ಹೆಸರು | - | ಈಶ್ವರ ದೇವಾಡಿಗ |
| ವಯಸ್ಸು | - | 34 ವರ್ಷ |
| ಉದ್ಯೋಗ | - | ಪೈಂಟಿಂಗ್ |
| ವಿಳಾಸ | - | ಲಕ್ಷ್ಮೀನಗರ, ತೆಂಕನಿಡಿಯೂರು ಗ್ರಾಮ, ಉಡುಪಿ. |

ದಿನಾಂಕಃ 29-09-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

1. ಮೃತ ಯೋಗೀಶನ ಪರಿಚಯ ಇದೆ. ಆತನು ತೆಂಕನಿಡಿಯೂರು ಗ್ರಾಮದ ಲಕ್ಷ್ಮೀನಗರದ ಮೂರನೇ ಕ್ರಾಸ್‌ನಲ್ಲಿ ವಾಸ ಮಾಡಿಕೊಂಡಿದ್ದನು. ದಿಃ 06-02-2020 ರಂದು ರಾತ್ರಿ ಸುಮಾರು 11-30 ನಾನು ನನ್ನ ಮನೆಯಲ್ಲಿದ್ದಾಗ ದೀಪು ಕೋಟ್ಯಾನ್ ಇವರು ಫೋನ್ ಕರೆ ಮಾಡಿ ಯೋಗೀಶನಿಗೆ ಚಾಕುವಿನಿಂದ ಬೆನ್ನಿಗೆ, ಹೊಟ್ಟೆಗೆ ತಿವಿದಿರುತ್ತಾರೆ, ಆತನನ್ನು ಮಣಿಪಾಲದ ಕೆಎಂಸಿ ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ ಎಂದು ಮಾಹಿತಿ ನೀಡಿದ್ದು ಅದರಂತೆ ತಕ್ಷಣ ನಾನು ಮಣಿಪಾಲದ ಕೆಎಂಸಿ ಆಸ್ಪತ್ರೆಗೆ ಹೋಗಿರುತ್ತೇನೆ. ನಾನು ಅಲ್ಲಿಗೆ ಹೋಗುತ್ತಿರುವಾಗ ಆತ ಮೃತಪಟ್ಟ ಎಂದು ತಿಳಿದು ಬಂತು. ಆಸ್ಪತ್ರೆಗೆ ಹೋಗಿ ಮೃತ ದೇಹವನ್ನು ನೋಡಿದಾಗ ಆತನ ಹೊಟ್ಟೆಗೆ ಮತ್ತು ಬೆನ್ನಿಗೆ ಚಾಕುವಿನಿಂದ ತಿವಿದ ಗಾಯಗಳು ಕಂಡುಬಂದಿರುತ್ತದೆ. ನಂತರ ವಿಚಾರ ತಿಳಿಯಲಾಗಿ ಆರೋಪಿತರಾದ ರೋಹಿತ್ ಪಿಂಟೋ, ಸುಜಿತ್ ಪಿಂಟೋ, ವಿನಯ್ ದೇವಾಡಿಗ, ಪ್ರದೀಪ್, ಅನುಪ್ ಕುಂದರ್ ಮತ್ತು ಗಿರೀಶ್ ಶೆಟ್ಟಿ ಎಂಬವರು ಹಲ್ಲೆ ಮಾಡಿರುತ್ತಾರೆಂದು ಗೊತ್ತಾಯಿತು. ಸದ್ರಿ ಆರೋಪಿತರನ್ನು ನಾನು ಈ ಹಿಂದೆ ನೋಡಿರುವುದರಿಂದ ಅವರ ಪರಿಚಯ ಇದೆ. ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ 3 ರಿಂದ 6 ನೇ ಆರೋಪಿತರು ಹಾಗೂ ನ್ಯಾಯಾಂಗ

ಬಂಧನದಲ್ಲಿರುವ 1 ಮತ್ತು 2 ನೇ ಆರೋಪಿತರನ್ನು ವೀಡಿಯೋ ಕಾನ್ಫರೆನ್ಸ್ ಮೂಲಕ ನೋಡಿ ಗುರುತಿಸಿರುತ್ತೇನೆ. ಶವ ಮಹಜರು ಕಾಲದಲ್ಲಿ ಈ ವಿಚಾರವನ್ನು ಪೋಲಿಸರಿಗೆ ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ.

2. ದಿಃ 08-07-2020 ರಂದು ಬೆಳಿಗ್ಗೆ 7-30 ರ ಸಮಯದಲ್ಲಿ ಪೋಲಿಸರು ನನ್ನನ್ನು ಉಡುಪಿಯ ವೃತ್ತ ಕಚೇರಿಗೆ ಕರೆಸಿದ್ದು, ನನ್ನ ಜೊತೆ ದೀಪಕ್ ಚಾಸಾ13 ಸಹಾ ಇದ್ದರು. ಆಗ ವೃತ್ತ ಕಚೇರಿಯಲ್ಲಿ 1 ರಿಂದ 4 ನೇ ಆರೋಪಿತರು ಪೋಲಿಸರ ವಶದಲ್ಲಿ ಇದ್ದರು. ಆ ಸಮಯದಲ್ಲಿ 1 ರಿಂದ 4 ನೇ ಆರೋಪಿತರು ತಮ್ಮ ಸ್ವ ಇಚ್ಛಾ ಹೇಳಿಕೆಯನ್ನು ನೀಡಿದ್ದು ಸದ್ರಿ ಹೇಳಿಕೆಯಲ್ಲಿ ಕೃತ್ಯ ನಡೆಸಿದ ಸ್ಥಳ ಮತ್ತು ಕೊನೆಯದಾಗಿ ಮೃತ ವ್ಯಕ್ತಿ ಬಿದ್ದ ಸ್ಥಳ, ಕೃತ್ಯದ ಪೂರ್ವದಲ್ಲಿ ತಾವುಗಳು ಕಾರನ್ನು ನಿಲ್ಲಿಸಿದ ಸ್ಥಳ ಮತ್ತು ಕೃತ್ಯಕ್ಕೆ ಬಳಸಿದ ಚೂರಿ ಮತ್ತು ಕೃತ್ಯದ ಸಮಯದಲ್ಲಿ 4 ನೇ ಆರೋಪಿ ಧರಿಸಿದ್ದ ಬಟ್ಟೆ ಬೀಸಾಡಿದ ಸ್ಥಳ ತೋರಿಸಿಕೊಡುತ್ತೇವೆ ಎಂದು ಹೇಳಿದ ಪ್ರಕಾರ ಇಲಾಖಾ ವಾಹನದಲ್ಲಿ ಆರೋಪಿತರು ತೋರಿಸಿದಂತೆ ನಾವೆಲ್ಲಾ ಪೋಲಿಸರೊಂದಿಗೆ ಅಜ್ಜರಕಾಡಿನಿಂದ ಅಂಬಲಪಾಡಿ ಮಾರ್ಗವಾಗಿ ಲಕ್ಷ್ಮೀನಗರದ ಮೂರನೇ ಅಡ್ಡ ರಸ್ತೆಯ ಬಳಿಗೆ ಕರೆದುಕೊಂಡು ಹೋಗಿ ಅಲ್ಲಿಂದ 100 ಮೀ. ಮುಂದಕ್ಕೆ ಹೋಗಿ ವಾಹನವನ್ನು ನಿಲ್ಲಿಸುವಂತೆ ತಿಳಿಸಿದಾಗ ನಾನು ಇಳಿದು ಕಾಂಕ್ರೀಟ್ ರಸ್ತೆಯಲ್ಲಿ ಸ್ವಲ್ಪ ದೂರ ನಡೆದುಕೊಂಡು ಹೋಗಿ ಇದೇ ಸ್ಥಳದಲ್ಲಿ ಯೋಗಿಶನಿಗೆ ಚಾಕುವಿನಿಂದ ಇರಿದ ಸ್ಥಳ ಎಂದು ತೋರಿಸಿಕೊಟ್ಟಿದ್ದು ಸದ್ರಿ ಸ್ಥಳವನ್ನು ಪರಿಶೀಲಿಸಲಾಗಿ ಸದ್ರಿ ಸ್ಥಳದಲ್ಲಿ ರಕ್ತದ ಕಲೆಗಳು ಇರುವುದು ಕಂಡುಬಂದಿರುತ್ತದೆ.

3. ಮುಂದುವರಿದು, ಸ್ಥಳದಿಂದ ಸುಮಾರು 60 ಅಡಿ ದೂರದಲ್ಲಿ ಜಾಗವನ್ನು ತೋರಿಸಿ ಅದೇ ಸ್ಥಳದಲ್ಲಿ ಯೋಗಿಶನು ಬಿದ್ದ ಸ್ಥಳ ಎಂದು ತೋರಿಸಿದ್ದು ಈ ಎರಡೂ ಸ್ಥಳಗಳನ್ನು ಪೋಲಿಸರು ಪರಿಶೀಲಿಸಿ ಸ್ಥಳ ಮಹಜರು ಮಾಡಿರುತ್ತಾರೆ. ಆಗ ಸಮಯ ಸುಮಾರು ಬೆಳಿಗ್ಗೆ 8-00 ರಿಂದ 9-00 ಗಂಟೆಯಾಗಿತ್ತು. ಆ ಸಮಯ ಪೋಲಿಸರು ಸ್ಥಳ ಮಹಜರು ಬರೆದು ನನ್ನ ಹಾಗೂ ಚಾಸಾ13 ರವರ ಸಹಿಯನ್ನು ಪಡೆದುಕೊಂಡಿರುತ್ತಾರೆ. ಆ ಸಮಯದಲ್ಲಿ ಪೋಲಿಸರು ಛಾಯಾ ಚಿತ್ರ ತೆಗೆದಿರುತ್ತಾರೆ. ಸದ್ರಿ ಮಹಜರನ್ನು ಈಗ ನೋಡುತ್ತಿದ್ದು ನಿಪಿ-38 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನು ನಿಪಿ-38(ಎ) ಎಂದು ಗುರುತಿಸಲಾಯಿತು. ಎರಡು ಛಾಯಾ ಚಿತ್ರಗಳನ್ನು ನಿಪಿ-39 ಮತ್ತು 40 ಎಂದು ಗುರುತಿಸಲಾಯಿತು.

4. ನಂತರ ಅಲ್ಲಿಂದ ಆರೋಪಿತರು ನಮ್ಮನ್ನು 100 ಮೀ. ನಷ್ಟು ದೂರ ಕರೆದುಕೊಂಡು ಹೋಗಿ ಒಂದು ಸ್ಥಳವನ್ನು ತೋರಿಸಿ ಹಲ್ಲೆ ಮಾಡಲು ಉಪಯೋಗಿಸಿದ ವ್ಯಾಗನ್‌ಆರ್ ಕಾರನ್ನು ನಿಲ್ಲಿಸಿದ ಸ್ಥಳ ಎಂದು ತೋರಿಸಿದ್ದು ಸದ್ರಿ ಸ್ಥಳವು ಬೊಬ್ಬರ್ಯಕಟ್ಟೆ ದೇವಸ್ಥಾನದ ಬಳಿ ಇರುವ ಕಾಂಕ್ರೀಟ್ ರಸ್ತೆಯ ಪಕ್ಕದ ಸ್ಥಳವಾಗಿದ್ದು ಸದ್ರಿ ಸ್ಥಳವನ್ನು ಪೋಲಿಸರು ಪರಿಶೀಲಿಸಿ ಅಲ್ಲಿಂದ ಪಶ್ಚಿಮ ದಿಕ್ಕಿನಲ್ಲಿ ಸುಮಾರು 50 ಅಡಿ ದೂರ ಕರೆದುಕೊಂಡು ಹೋಗಿ ಗಿಡಗಂಟಿಗಳು ಬೆಳೆದ ಸ್ಥಳವನ್ನು ತೋರಿಸಿ ಪ್ಲಾಸ್ಟಿಕ್ ಚೀಲದಲ್ಲಿ ಬಟ್ಟೆ ಮತ್ತು ಚಾಕುವನ್ನು ಎಸೆದಿರುವುದಾಗಿ ಆರೋಪಿತರು ತೋರಿಸಿದಾಗ ನಾವು ಹುಡುಕಾಡಲಾಗಿ, ಪ್ಲಾಸ್ಟಿಕ್ ಚೀಲ ದೊರೆತಿದ್ದು, ಅದರಲ್ಲಿ ರಕ್ತ ತಾಗಿದ್ದ ಬಟ್ಟೆ ಹಾಗೂ ಚಾಕು ದೊರೆತಿರುತ್ತದೆ. ಆ ಬಟ್ಟೆಗಳು 4 ನೇ ಆರೋಪಿ ಪ್ರದೀಪ್ ಕೃತ್ಯ ಸಮಯ ಧರಿಸಿದ್ದ ಬಟ್ಟೆಯಾಗಿದ್ದು, 2 ನೇ ಆರೋಪಿಯು ಯೋಗಿಶನಿಗೆ ಹಲ್ಲೆ ಮಾಡಲು ಉಪಯೋಗಿಸಿದ ಚಾಕು ಎಂದು ಆರೋಪಿತರು ತೋರಿಸಿದ್ದು ಅದನ್ನು ಪೋಲಿಸರು ಬಿಳಿ ಬಟ್ಟೆಯಿಂದ ಸುತ್ತಿ ಪ್ಯಾಕ್ ಮಾಡಿ ಸೀಲು ಮಾಡಿರುತ್ತಾರೆ. ಅದೇ ಸಮಯ ಮಹಜರು ಬರೆದಿರುತ್ತಾರೆ. ಈ ಎರಡು ಸ್ಥಳಗಳಲ್ಲಿ ಬರೆದ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-42 ಎಂದು ಗುುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-42(ಎ) ಎಂದು ಗುರುತಿಸಲಾಯಿತು. ಅದೇ ಸಮಯ ತೆಗೆದ ಛಾಯಾ ಚಿತ್ರಗಳನ್ನು ನಿಪಿ-43 ಮತ್ತು 44 ಎಂದು ಗುರುತಿಸಲಾಯಿತು. ಸೊತ್ತುಗಳನ್ನು ಅಮಾನತ್ತು ಪಡಿಸಿದಾಗ ಪಂಚರ ಸಹಿವುಳ್ಳ ಚೀಟಿಯನ್ನು ಅಂಟಿಸಿರುತ್ತಾರೆ. ಸದ್ರಿ ಸೊತ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಚಾಕುವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮುದ್ದೆಮಾಲು-3 ಎಂದು ಗುರುತಿಸಲಾಗಿದೆ.

5. ಪ್ಯಾಕ್ ಮಾಡಿ ಸೀಲು ಮಾಡಲಾದ ಮುದ್ದೆಮಾಲಿನ ಮೇಲೆ ಅಂಟಿಸಿರುವ ಚೀಟಿಯಲ್ಲಿ ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ತೆರೆದು ಸಾಕ್ಷಿಗೆ ತೋರಿಸಲಾಗಿ, ಅದು ಬಿಳಿ ಬಣ್ಣದ ಅಡ್ಡ ನೀಲಿ ಗೆರೆಗಳಿರುವ ಕಾಟನ್ ಅಂಗಿಯಾಗಿದ್ದು ಅದನ್ನು ಮುದ್ದೆಮಾಲು-5 ಎಂದು ಗುರುತಿಸಲಾಯಿತು.

6. ನಂತರ ಒಮ್ಮೆ ಠಾಣೆಗೆ ಹೋದಾಗ ಠಾಣೆಯಲ್ಲಿದ್ದ 5 ನೇ ಆರೋಪಿ ಅನುಪ್ ಕುಂದರ್ ಅನ್ನು ಗುರುತಿಸಿದ್ದೇನೆ.

**<u>ಪಾಟಿ ಸವಾಲು ಆರೋಪಿತರ  ಪರ ವಕೀಲರಿಂದಃ</u>**

ಆರೋಪಿತರ ಪರ ವಕೀಲರು ಪಾಟಿ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು  ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ದಿನೇಶ್  ಹೆಗ್ಡೆ)
ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.